ಮತ್ತು ನೀತಿ ಸಂಹಿತೆ ಇವೊತ್ತಿನಿಂದ ಚುನಾವಣೆಯವರೆಗೂ ಏನು ಜಾರಿಯಾಗಿದೆ ಯಾವುದೇ ರೀತಿಯಲ್ಲಿ ಆಡಳಿತಾತ್ಮಕವಾಗಿ ಸಚಿವರಾಗಲಿ, ಯಾರೇ ಆಗಲಿ ಘೋಷಣೆಗಳನ್ನು ಮಾಡುವಂಥದ್ದು, ನೀರು ಕೊಡುವ ಯೋಜನೆಗಳನ್ನು ಘೋಷಣೆ ಮಾಡುವಂಥದ್ದು, ಬೇರೆ ಬೇರೆ ಅಭಿವೃದ್ಧಿ ಕೆಲಸಗಳ ಬಗ್ಗೆ ಘೋಷಣೆ ಮಾಡುವಂಥದ್ದು ತತ್‌ಕ್ಷಣ ನಿಲ್ಲಿಸಬೇಕು. ಮಾನ್ಯ ಸಚಿವರು ಆ ಬಗ್ಗೆ ಈ ಸದನಕ್ಕೆ ತಿಳಿಸಬೇಕು.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಈಗೇನು ಮಾನ್ಯ ಸುರೇಶ್‌ಕುಮಾರ್‌ರವರು ಹಾಗೂ ಮಾನ್ಯ ಬಚ್ಚೇಗೌಡರು ಕೃಷ್ಣರಾಜಪುರ ನಗರಸಭೆಗೆ ಚುನಾವಣೆ 10ನೇ ತಾರೀಖು ನಡೆಯುತ್ತಿದೆ ಎಂದು ಪ್ರಕಟಣೆ ಬಂದಿರುವುದನ್ನು ಸದನದಲ್ಲಿ ಹೇಳಿ ತಮ್ಮ ಗಮನವನ್ನು ಸೆಳೆದಿದ್ದಾರೆ, ಇದು ರೆಗ್ಯುಲರ್ ಕೋರ್ಸ್ ಚುನಾವಣೆ. ಇದರ ಡೇಟ್ ಫಿಕ್ಸ್ ಮಾಡಲು ಸರ್ಕಾರಕ್ಕೂ ಕೇಳುವುದಿಲ್ಲ, ಯಾರಿಗೂ ಕೇಳುವುದಿಲ್ಲ. ಸೀಟ್ ವೆಕೇಟ್ ಆದ ತಕ್ಷಣ ಅವರೇ ಡೇಟ್ ಫಿಕ್ಸ್ ಮಾಡಿ ಚುನಾವಣೆ ದಿನವನ್ನು ನಿಗದಿ ಮಾಡುತ್ತಾರೆ. ಕ್ಯಾಟಗರಿ ಮಾಡುವಂಥ ವಿಚಾರದಲ್ಲಿ ಅದಕ್ಕೂ ಕೂಡ ಇಷ್ಟು ದಿನಗಳಲ್ಲಿಯೇ ಮಾಡಬೇಕು ಎಂದು ನಿಗಧಿ ಇರುತ್ತದೆ. ನಾನು ಮಾನ್ಯ ಸುರೇಶ್‌ಕುಮಾರ್‌ರವರಿಗೆ ಹಾಗೂ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೆ ಹಾಗೂ ಮಾನ್ಯ ಬಚ್ಚೇಗೌಡರ ಎರಡು ವಾರ್ಡ್‌ಗಳಿಗೆ ಸಂಬಂಧಪಟ್ಟಂತೆ ಬಹುಶಃ ಸೂರ್ಯ ಮುಳುಗುವುದರೊಳಗೆ ವರದಿಯನ್ನು ತರಿಸಿ ಏನಿದೆ, ಏನಾಗಿದೆ, ಏನಾಗಬಹುದು, ಏನು ಮಾಡಿದ್ದೇವೆ ಎಂಬುದನ್ನು ತಿಳಿಸುತ್ತೇನೆ.

(vi) ವಿಷಯ:– ಶ್ರೀಗಂಧ ಕೆತ್ತನೆ ಕುಶಲಕರ್ಮಿಗಳಿಗೆ ಗಂಧದ ತುಂಡುಗಳನ್ನು ಒದಗಿಸುವುದು

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ):– ಮಾನ್ಯ ಉಪಾಧ್ಯಕ್ಷರೆ, ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿರುವ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಹಿರಿಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಸದನದಲ್ಲಿ ಈಗ ಉಪಸ್ಥಿತರಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:– ನೀವು ವಿಷಯ ಪ್ರಸ್ತಾಪಿಸುವ ಮೊದಲೇ ನಾನು ಉತ್ತರ ಹೇಳಿ ಬಿಡುತ್ತೇನೆ. ಈಗಾಗಲೇ 5 ಟನ್ ಗಂಧ ಬಿಡುಗಡೆಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಬಿಡುಗಡೆಯಾಗಿದೆ ಎಂದರೆ ಈ ರೀತಿ ಬಿಡುಗಡೆ 15 ತಿಂಗಳ ಹಿಂದೆ ಆಗಿತ್ತು. ಆಮೇಲೆ ಏನಾಗಿದೆ ಎಂಬುದನ್ನು ನಾನು ಹೇಳುತ್ತೇನೆ. ಶ್ರೀಗಂಧದ ಕರಕುಶಲ ಕರ್ಮಿಗಳು ಕಳೆದ ಹತ್ತು ದಿನಗಳಿಂದ ಇಡೀ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಶಿರಸಿ, ಸಾಗರ, ಕುಮಟಾ, ಸೊರಬ, ಇತ್ಯಾದಿ ಕಡೆಗಳಲ್ಲಿ ಅವರು ಧರಣಿಯನ್ನು ಮಾಡುತ್ತಿದ್ದಾರೆ. ಹೋರಾಟವನ್ನು ಮಾಡುತ್ತಿದ್ದಾರೆ. ಅವರ ಮುಖ್ಯವಾದಂಥ ಬೇಡಿಕೆ ಏನೆಂದರೆ.

ಶ್ರೀ ಕಾಗೋಡು ತಿಮ್ಮಪ್ಪ:– ಮುಖ್ಯವಾದ ಬೇಡಿಕೆಗೆ ಈಗಾಗಲೇ ಉತ್ತರ ಕೊಟ್ಟಿದ್ದೇನಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಲ್ಲ, ಅದಿನ್ನೂ ಆಗಿಲ್ಲ. ಆದೇನು ಎಂದರೆ ಒಂದು ತಾತ್ಪೂರ್ತಿಕವಾದಂಥ ಪರಿಹಾರಕ್ಕೆ ಸೂಚನೆ ಕೊಟ್ಟಿದ್ದಾರೆ. ನಾನು ಹೇಳುವುದು ಏನೆಂದರೆ ಸರ್ಕಾರ ಹೀಗೆ ಮಾಡಿರುವುದರಿಂದ ಏನಾಗಿದೆ ಎಂದರೆ, ನನ್ನ ಕ್ಷೇತ್ರದಲ್ಲಿ 1225 ಕುಟುಂಬಗಳು ಶ್ರೀಗಂಧದ ಕೆತ್ತನೆಯ ಕರಕುಶಲ ಕೆಲಸವನ್ನು ಮಾಡುವುದಕ್ಕೆ 1225 ಕುಟುಂಬಗಳು ಪರ್ಮಿಟ್ ತೆಗೆದುಕೊಂಡಿದ್ದಾರೆ. ಪರೋಕ್ಷವಾಗಿ ಸುಮಾರು 20 ಲಕ್ಷ ಕುಟುಂಬಗಳು ಇದರ ಮೇಲೆ ಅವಲಂಬಿತವಾಗಿವೆ. ನಮಗೆ

ಗೊತ್ತಿರುವಂತೆ ಶ್ರೀಗಂಧದ ಕೆತ್ತನೆಯ ಕೆಲಸ ಇದು ಅತ್ಯಂತ ಪ್ರಮುಖವಾದಂಥ, ಪ್ರಾಮುಖ್ಯತೆ ಹೊಂದಿದಂಥ ಪ್ರಾವಿಣ್ಯತೆಯನ್ನು ಹೊಂದಿರುವಂಥ ಕೆಲಸ. ನಾವು ವಿಧಾನಸಭೆಯಲ್ಲಿ ಕುಳಿತುಕೊಂಡಿದ್ದೇವೆ. ಇಲ್ಲಿ ಕೆತ್ತನೆ ಮಾಡಿರುವಂಥ ಭವ್ಯ ರೂಪವನ್ನು ನೋಡಿದರೆ ನಮಗೆ ಸಂತೋಷವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:– ಸಾಗರ, ಸೊರಬದವರೇ ಇದನ್ನು ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸಾಗರ, ಸೊರಬದವರೂ ಇದ್ದಾರೆ, ನಮ್ಮ ಶಿರಸಿಯವರೂ ಇದ್ದಾರೆ, ಕುಮಟಾದವರೂ ಇದ್ದಾರೆ. ಅನೇಕ ಪ್ರಶಸ್ತಿ ಪಡೆದುಕೊಂಡಿರುವವರು. ನಾವು ನೀವು ಎರಡೂ ಜಿಲ್ಲೆಯವರೇ ಈ ರೀತಿ ಗಂಧದ ಕೆತ್ತನೆ ಕೆಲಸದಲ್ಲಿ ಮುಂದಿದ್ದಂಥವರು. ಕೇವಲ ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಾವಿಣ್ಯತೆ ಪಡೆದು ಈ ಗಂಧದ ಕೆತ್ತನೆ ಕೆಲಸದಿಂದಾಗಿ ನಮ್ಮ ರಾಜ್ಯಕ್ಕೆ ಕೀರ್ತಿ ಬಂದಿರುವುದಿದೆ. ನಮ್ಮ ರಾಜ್ಯದ ಕೀರ್ತಿಯನ್ನು ಹೆಚ್ಚಿಸುವುದಕ್ಕೆ ಶ್ರೀಗಂಧ ಒಂದು ಪ್ರಮುಖವಾದಂಥ ಪಾತ್ರವನ್ನು ವಹಿಸಿದೆ. ಅದರಲ್ಲಿ ಗಂಧದ ಕೆತ್ತನೆ ಕೆಲಸವೂ ಇದೆ. ನಾನು ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುವುದೇನೆಂದರೆ ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಸ್ವಲ್ಪ ಗಂಧವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಅಲ್ಲಿ ಪ್ರತಿ ತಿಂಗಳು 9 ಕೆ.ಜಿ. ಗಂಧವನ್ನು ಕೊಡಬೇಕು ಎಂದು ಸರ್ಕಾರ ಒಪ್ಪಿಕೊಂಡಿದೆ. 1991ನೇ ವರ್ಷದಲ್ಲಿ ವಿಶ್ವ ಯೋಜನೆಯಲ್ಲಿ ಈ ಒಂದು ಕೆಲಸ ಪ್ರಾರಂಭವಾದ ನಂತರದಲ್ಲಿ ಕರಕುಶಲ ಕರ್ಮಿಗಳನ್ನು ರಕ್ಷಿಸಬೇಕು, ಗ್ರಾಮಾಂತರ ಸಂಸ್ಕೃತಿ ಅಥವಾ ವಿಶೇಷತೆಯನ್ನು ರಕ್ಷಿಸಬೇಕು ಎಂದು ಗೊತ್ತಾದಾಗಲೀ ಒಂದು ಕಾರ್ಡ್ ಹೋಲ್ಡ್‌ಗೆ 9 ಕೆ.ಜಿ. ಕೊಡಬೇಕು ಎಂದು ಆಗಿದೆ. ಆದರೆ ಜನವರಿಯೊಳಗೆ 9 ಕೆ.ಜಿ. ಯನ್ನು ಪೂರ್ಣ ಕೊಡಲಿಲ್ಲ. ಜನವರಿಯಲ್ಲಿ ಕೊಟ್ಟ ನಂತರ ಈಗ ಬಿಡುಗಡೆ ಮಾಡಿದ್ದೇವೆ ಎನ್ನುತ್ತಾರೆ. ಆ ಜನವರಿಯಲ್ಲಿ ಕೊಡುವುದಕ್ಕಿಂತ ಹಿಂದೆ 15 ತಿಂಗಳು ಶ್ರೀಗಂಧವನ್ನು ಕೊಟ್ಟಿರಲಿಲ್ಲ. ನಾನು ನಮ್ಮ ಶಾಸಕರುಗಳ ಜೊತೆಯಲ್ಲಿ ಸೇರಿಕೊಂಡು, ಗಂಧದ ಕೆಲಸಗಳನ್ನು ಮಾಡುವವರ ಪ್ರತಿನಿಧಿಯನ್ನು ಕರೆದುಕೊಂಡು ಹೋಗಿ ಮುಖ್ಯಮಂತ್ರಿಗಳನ್ನು ಭೇಡಿ ಮಾಡಿಸಿದೆ. ಸ್ವತಃ ಮುಖ್ಯಮಂತ್ರಿಗಳ ಗೃಹ ಕಛೇರಿಗೆ ಹೋಗಿ ಭೇಟಿ ಮಾಡಿದ್ದೇವೆ. ಈ ಗಂಧದ ಕೆಲಸ ಮಾಡುತ್ತಾ ಇರುವಂಥವರು ಅವರ ಶ್ರೀಗಂಧ ಎಷ್ಟು ಸುವಾಸನೆಯುಕ್ತವಾದಂಥದ್ದೋ, ಆದರೆ ಆ ಕೆಲಸವನ್ನು ಮಾಡುವ ಅವರ ಜೀವನ ನೋಡಿದರೆ ಎಷ್ಟು ಕಷ್ಟವಾಗಿದೆ, ದುರ್ಗಮವಾಗಿದೆ. ಅವರು ಇವೊತ್ತು ಯಾವುದಾದರೂ ಒಂದು ರೀತಿಯಲ್ಲಿ ನಮಗೆ ವಿಷ ಕೊಟ್ಟುಬಿಡಿ, ಗಂಧದ ಕೆಲಸ ಮಾಡುವುದಕ್ಕಿಂತ ವಿಷವನ್ನು ಕುಡಿಯುವುದೇ ಲೇಸು, ನಮಗೆ ವಿಷ ಕೊಟ್ಟು ಬಿಡಿ ನಾವು ಸಾಯುತ್ತೇವೆ ಎಂದು ಕೇಳುವ ಸ್ಥಿತಿಯಲ್ಲಿ ಅವರಿದ್ದಾರೆ. ಅವರು ಜೀವನ ನಡೆಸುವುದೇ ಕಷ್ಟವಾಗಿದೆ. ತಿಂಗಳಿಗೆ 9 ಕೆ.ಜಿ. ಯಲ್ಲ, ಒಂದೆರಡ್ಮೂರು ಕೆ.ಜಿ. ತಿಂಗಳಿಗೆ ಕಡಿಮೆಯೇ ಕೊಡಲಿ. ಒಟ್ಟಿನಲ್ಲಿ ಪ್ರತಿ ತಿಂಗಳು ಅವರಿಗೆ ಗಂಧವನ್ನು ಕೊಡಬೇಕು. ಮಾನ್ಯ ಉಪಾಧ್ಯಕ್ಷರೆ, ನನ್ನ ವಿನಂತಿ ಎಂದರೆ, ಗಂಧ ಇಲ್ಲ ಎಂದೇ ಇಲ್ಲ. ಸುಮಾರು 300 ಟನ್ ಗಂಧ ಬೇರೆ ಬೇರೆ ಕಾರಣಗಳಿಂದ ಕೋರ್ಟ್‌ನಲ್ಲಿ ವಿಚಾರಣೆಗೊಳಪಟ್ಟು ಇವೊತ್ತು ಸೀನ್ ಆಗಿದೆ. ನಾನು ಹೇಳುವುದೇನೆಂದರೆ ಕೋರ್ಟ್‌ನಲ್ಲಿ ಕಾನೂನು ಪ್ರಕಾರವಾಗಿ ಆ ಕೇಸ್‌ಗಳು ಹೇಗೆ ಡಿಸ್‌ಪೋಸ್ ಆಗಬೇಕೋ ಹಾಗೆಯೇ ಡಿಸ್‌ಪೋಸ್ ಆಗಲಿ. ಆದರೆ ಯಾವುದಾದರೂ ರೀತಿಯಲ್ಲಿ ಒಂದು ಅಮೆಂಡ್‌ಮೆಂಟ್‌ನ್ನು ತಂದು ಅಲ್ಲಿರುವಂಥ

ಗಂಧವನ್ನು ರಿಲೀಸ್ ಮಾಡಿಸಿಕೊಂಡು ಅದನ್ನಾದರೂ ಈ ಕುಶಲಕರ್ಮಿಗಳಿಗೆ ಕೊಟ್ಟರೆ ಅವರು ತಮ್ಮ ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಆ ರೀತಿ ಈ ಒಂದು ಕಲೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಹೀಗಾಗಿ ಸರ್ಕಾರ ಈ ಗಂಧವನ್ನು ಬಿಡುಗಡೆ ಮಾಡಬೇಕು. ನಾನು ಆ ವೀರಪ್ಪನ್ ಎಷ್ಟೆಷ್ಟು ಗಂಧವನ್ನು ತೆಗೆದುಕೊಂಡು ಹೋದನೋ ಆ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ನಮ್ಮ ನಾಡಿನಲ್ಲಿ ಕರಕುಶಲ ಕೆಲಸ ಮಾಡುವಂಥ ಕುಶಲ ಕರ್ಮಿಗಳಿಗೆ ನಾವು ಗಂಧ ಕೊಡುವುದಕ್ಕೆ ಆಗದೇ ಇರುವಂಥ ಸ್ಥಿತಿಯಲ್ಲಿ ಇರುವುದು ಯೋಗ್ಯವಲ್ಲ. ಇನ್ನು ಹರಾಜು ಮಾಡುತ್ತಾರೆ. ಬೇರೆ ರಾಜ್ಯದವರು ಹರಾಜಿನಲ್ಲಿ ಬಂದ ನಮ್ಮ ಗಂಧವನ್ನು ತೆಗೆದುಕೊಂಡು ಹೋಗುತ್ತಾರೆ. ನಮ್ಮ ಕುಶಲಕರ್ಮಿಗಳಿಗೆ ಇಲ್ಲಿ ಗಂಧವಿಲ್ಲ. ಇಲ್ಲಿ ಹರಾಜು ಮಾಡಿ ಬೇರೆ ರಾಜ್ಯದವರು ಬಂದು ಗಂಧ ತೆಗೆದುಕೊಂಡು ಹೋಗುತ್ತಾರೆ. ಇದು ಯಾವ ನ್ಯಾಯ ಹೇಳಿ. ನಮಗೇ ಇಲ್ಲದೇ ಬೇರೆಯವರಿಗೆ ಗಂಧ ಕೊಡುವುದು. ಇನ್ನು ಸಬ್ಸಿಡಿಯನ್ನು ನಿಲ್ಲಿಸಿ ಬಿಟ್ಟಿದ್ದಾರೆ. ಹಾಗಾಗಿ ಈಗ ಸಬ್ಸಿಡಿಯನ್ನು ಮುಂದುವರಿಸಿ ಗಂಧವನ್ನು ಕೊಡುವಂಥ ಕೆಲಸವಾಗಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಎಲ್ಲಾ ವಿಷಯಗಳು ಗೊತ್ತಿದೆ. ಕುಶಲ ಕರ್ಮಿಗಳ ಇನ್ನೂ ಅನೇಕ ಬೇಡಿಕೆಗಳಿವೆ. ಆ ಎಲ್ಲಾ ಬೇಡಿಕೆಗಳನ್ನು ಕುರಿತಂತೆ ಧರಣಿ, ಹೋರಾಟವನ್ನು ಕುಶಲ ಕರ್ಮಿಗಳು ಮಾಡುತ್ತಿದ್ದಾರೆ. ಈ ಸದನದಲ್ಲಿ ಕುಶಲಕರ್ಮಿಗಳ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆಯನ್ನು ಮಾಡುತ್ತಿದೆ. ಅವರಿಗೆ ಪ್ರತಿ ತಿಂಗಳು 9 ಕೆ.ಜಿ. ಅಥವಾ 8 ಕೆ.ಜಿ. ಅಥವಾ ಅದೂ ಆಗದಿದ್ದರೆ 7 ಕೆ.ಜಿ. ಗಂಧವನ್ನಾದರೂ ಕೊಡಲಿ. ಪ್ರತಿ ತಿಂಗಳು ನಿಶ್ಚಿತವಾದಂಥ ಗಂಧವನ್ನು ಅವರಿಗೆ ಕೊಟ್ಟೇ ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಸರ್ಕಾರ ಕೊಡಬೇಕು. ಕಾಗೋಡು ತಿಮ್ಮಪ್ಪನವರು ಹೇಳಿದರು, ಈಗ ಬಿಡುಗಡೆ ಮಾಡಿದೆ ಎಂದು. ಆದರೆ ಈಗ ಬಿಡುಗಡೆ ಮಾಡಿ ಮತ್ತೆ 15 ತಿಂಗಳ ನಂತರ ಬಿಡುಗಡೆ ಮಾಡುವಂಥ ಸ್ಥಿತಿ ಆಗಬಾರದು. ಹೀಗಾದರೆ ಮುಂದಿನ ತಿಂಗಳು ಏನು ಅವರ ಕಥೆ? ಮುಂದಿನ ತಿಂಗಳು ಯಾರೂ ಅವರಿಗೆ ಗಂಧ ಕೊಡುವವರು? ಆದ್ದರಿಂದ ಪ್ರತಿ ತಿಂಗಳು ಅವರಿಗೆ ಗಂಧ ಕೊಡುತ್ತೇವೆ ಎನ್ನುವಂಥ ಉತ್ತರ ಈ ಸದನದ ಮೂಲಕ ಅವರಿಗೆ ಹೋಗಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇದಕ್ಕೆ ಕಾಗೋಡು ತಿಮ್ಮಪ್ಪನವರು ನಿಶ್ಚಿತವಾಗಿ ಸ್ಪಂಧಿಸುತ್ತಾರೆ. ಏಕೆಂದರೆ ನಮ್ಮ ಜಿಲ್ಲೆ ಮತ್ತು ಅವರ ಜಿಲ್ಲೆಯಲ್ಲಿ ಈ ರೀತಿಯಾದಂಥ ಸಮಸ್ಯೆ ಇರುವುದು ಎಂದು ಭಾವಿಸಿಕೊಂಡು ಸರ್ಕಾರ ಇದರ ಬಗ್ಗೆ ಗಂಭೀರವಾಗಿ ಪ್ರತ್ಯುತ್ತರವನ್ನು ಕೊಟ್ಟು ಕುಶಲಕರ್ಮಿಗಳು ಹೋರಾಟವನ್ನು ನಿಲ್ಲಿಸುವುದಕ್ಕೆ ಕಾರಣಿಕೃತರಾಗಬೇಕೆಂದು ಹೇಳಿ ವಿನಂತಿಸಿಕೊಳ್ಳುತ್ತಿದ್ದೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಣ್ಣ ಕೈಗಾರಿಕಾ ಇಲಾಖಾ ಸಚಿವರು ಈ ಬಗ್ಗೆ ಒಂದು ನೋಟ್ ಮಾಡಿಕೊಟ್ಟಿದ್ದಾರೆ. ಅವರ ಪರವಾಗಿ ತಮ್ಮ ಅಪ್ಪಣೆ ಪಡೆದು ನಾನು ಈ ಸದನದಲ್ಲಿ ಅದನ್ನು ಓದಿ ಹೇಳಿಬಿಡುತ್ತೇನೆ.

The Karnataka State Handicrafts Development Corporation Limited is a nodal agency for the Development of Handicrafts in the State. The Corporation is purchasing Sandalwood from the Forest Department against the allotment and distributing it to the crafts persons.

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

There are 959 Sandalwood Crafts persons enrolled with the Corporation. The Annual requirement of Sandalwood (Ghatabadla/Jajpokal Class quality) is 100 Metric tones. However, in the recent years, due to scarcity of raw material, the Forest Department is not releasing the Sandalwood in sufficient quantity. The details of Sandalwood Purchased through the Forest Department in Karnataka and in auction sale in Tamilnadu for the Past 3 Years are given under:

Year	Karnataka Forest Dept.	Tamilnadu Forest Dept.
2000-2001	14.00 Mts.	7.50 Mts.
2001-2002	9.40 Mts.	1.53 Mts.
2002-2003	10.00 Mts.	-

As per the High Court W.P. No. 719 and 12322/2000 dated 6-9-2000, the Forest Department has been requested to allot the entire seized sandalwood (FOC) to the Corporation. The Corporation is providing budgetary allocation for purchase of Sandalwood from the Forest Department.

The Government has recently alloted 5 metric tones of sandalwood to the Corporation. The Corporation is revising the procurement prices as and when there is increase in the input costs.

The Forest Department has been requested to allot the Sandalwood confisicated under Forest Offence Cases. Further the State is making attempts to purchase the Sandalwood from Tamil Nadu Forest Department also. KSHDC is motivating the craft persons to make items in other woods such as Shivani wood etc.

ಮಾನ್ಯ ಉಪಾಧ್ಯಕ್ಷರೆ, ಒಂದು ಕಾಲದಲ್ಲಿ ಗಂಧದ ಮರವನ್ನು ಅರಣ್ಯ ಇಲಾಖೆಯವರ ಎಲ್ಲೆಲ್ಲಿ ಅರಣ್ಯದಲ್ಲಿ ಇರುತ್ತಿತ್ತು ಅದನ್ನು ಎಕ್ಸ್‌ಟ್ರಾಕ್ಟ್ ಮಾಡುತ್ತಿದ್ದರು ಎಂದರೆ ಸಂಗ್ರಹಣೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಇವರಿಗೆ ವಿತರಣೆ ಮಾಡುವುದಕ್ಕೆ ಯಾವ ತೊಂದರೆ ಇರಲಿಲ್ಲ. ಬಹಳ ವರ್ಷಗಳು ಇದರಲ್ಲಿ ನಾವು ಹೋರಾಟ ಮಾಡಿ ಎಲ್ಲಾ ಕೇಳಿ ಮಾಡಿ ಆಯಿತು. ಇತ್ತೀಚೆಗೆ ಅರಣ್ಯ ಇಲಾಖೆಯಿಂದ ನೇರವಾಗಿ ಸಂಗ್ರಹಣೆ ಮಾಡತಕ್ಕಂಥ ಕಾರ್ಯಕ್ರಮ ಇಲ್ಲ. ಏಕೆಂದರೆ ಗಂಧದ ಮರ ಎಲ್ಲಾ ಮುಗಿದು ಹೋಗಿದೆ. ಇಲ್ಲಿ ಇರುವಂತಹ ಸಮಸ್ಯೆ ಕಳೆದ ಎರಡು ವರ್ಷದಿಂದ ನಡೆಯುತ್ತಿದೆ. ನಾನು ಅರಣ್ಯ ಸಚಿವರ ಹತ್ತಿರ ಹೋಗಿ ಕುಳಿತುಕೊಂಡು ಎಲ್ಲಾ ಮಾಡಿದ್ದೇನೆ. ಅಲ್ಲಿ ಇರುವುದು ನಿಜ. ಮಾನ್ಯ ಬೈರೇಗೌಡರು ಎಲ್ಲೋ ಹೋದರು. ಅಲ್ಲಿ ಕೇಸ್‌ಗಳಿಗೆ ಸಂಬಂಧಪಟ್ಟಂತಹ

ಗಂಧದ ಮರ ಸೀಜ್ ಆಗಿ ಇರುವಂಥದ್ದು ನಿಜ. ಇದನ್ನು ರಿಲೇಜ್ ಮಾಡಬೇಕೆಂದು ಅರಣ್ಯ ಇಲಾಖೆಯವರು ಪ್ರಯತ್ನ ಮಾಡಿದರು. ಈಗ ಬಿಡುಗಡೆ ಆಗಿರತಕ್ಕಂಥ ಗಂಧದ ಮರದಲ್ಲಿ ಐದು ಮೆಟ್ರಿಕ್ ಟನ್ ಅನ್ನು ಬಿಡುಗಡೆ ಮಾಡಿದ್ದಾರೆ. ಈಗ ಅಲ್ಲಿರತಕ್ಕಂಥ ಗಂಧದ ಮರ ಏನಿದೆ ಅದನ್ನು ಬಿಡಿಸಿಕೊಳ್ಳಬೇಕು, ಈ ತೊಂದರೆ ನಮ್ಮ ಮಾನ್ಯ ಅರಣ್ಯ ಮಂತ್ರಿಗಳಿಗೂ ಕೂಡ ಗೊತ್ತಿದ್ದು, ಈ ಬಗ್ಗೆ ಏನಾದರೂ ತಿದ್ದುಪಡಿ ಮಾಡಿ ಸೆಕ್ಯುರಿಟಿ ಕೊಟ್ಟು ಬಿಡಿಸಿಕೊಳ್ಳುವುದಕ್ಕೆ ಅವಕಾಶ ಇದ್ದರೆ ಮಾಡಿ ಎಂದು ನಾವು ಮನವಿ ಮಾಡಿದ್ದೇವೆ. ನಿಮ್ಮ ಪರವಾಗಿ ನಾನು ಕೂಡ ಇದ್ದೇನೆ. ಏಕೆಂದರೆ ನಿಮ್ಮಲ್ಲಿ ಹೇಗೆ ಇದೆಯೋ ನಮ್ಮಲ್ಲಿ ಕೂಡ ಗಂಧದ ಮರದ ಕಾಂಪ್ಲೆಕ್ಸ್ ಅನ್ನು ಸಿರಸಿ ಹಾಗೂ ಬೀದರ್‌ನಲ್ಲಿ ಮಾಡಿದ್ದೇವೆ. ಆದುದರಿಂದ ಈ ಸಮಸ್ಯೆ ಗಂಭೀರವಾಗಿದೆ. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರು ಯಾರೂ ಜಮೀನು ಇದ್ದವರು ಅಲ್ಲ, ಶ್ರೀಮಂತರಲ್ಲ. ಅವರಿಗೆ ಇದೆ ವಂಶ ಪಾರಂಪರ್ಯವಾಗಿ ಬಂದು ಗಂಧದ ಮರದ ಉದ್ಯಮವನ್ನು ಅವಲಂಭಿಸಿಕೊಂಡು ಬಂದಿರತಕ್ಕಂಥಾದ್ದು ಶಾಶ್ವತವಾಗಿದೆ. ಅದಕ್ಕೋಸ್ಕರ ಅವರಿಗೆ ರಿಯಾಯಿತಿಯನ್ನು ಕೂಡ ಕೊಡುತ್ತಿದ್ದೆವು. ಇತ್ತೀಚೆಗೆ ಸರ್ಕಾರದ ಸಬ್ಸಿಡಿಯನ್ನು ನಿಲ್ಲಿಸಬೇಕೆಂದು ತೀರ್ಮಾನದ ಹಿನ್ನೆಲೆಯಲ್ಲಿ ಇದಕ್ಕೆ ಕೊಡಿಸುವಂತಹ ಸಬ್ಸಿಡಿಯನ್ನು ಕೂಡ ನಿಲ್ಲಿಸುವ ಸಾಧ್ಯತೆ ಇದೆ. ಆದರೂ ಕೂಡ ಅವರಿಗೆ ಕೊಡುವುದಕ್ಕೆ ತಯಾರಿದ್ದಾರೆ. ನಾವು ಈ ಸನ್ನಿವೇಶದಲ್ಲಿ ಇದ್ದೇವೆ. ಸರ್ಕಾರದ ಡಿಪೋದಲ್ಲಿ ಗಂಧದ ಮರ ಇದ್ದು ಅದನ್ನು ಕೊಡದೇ ಇರುವಂತಹ ವಿಚಾರ ಇಲ್ಲ ಏಕೆಂದರೆ ಅವರಿಗೆ ಬೇಕಾದ್ದು ಎಲ್ಲವೂ ಈ ಮರದಲ್ಲಿ ಬರುವುದಿಲ್ಲ. ಅವರಿಗೆ ಬೇಕಾಗಿರುವುದು ಕಾರ್ವಿಂಗ್‌ಗೆ ಸ್ಪೆಷಲ್ ಆಗಿ ಬುಡ, ದಪ್ಪ ಇರಬೇಕಾಗುತ್ತದೆ. ಕೊಂಬೆ ಅದರೆ ಅದು ಮಾಡುವುದಕ್ಕೆ ಬರುವುದಿಲ್ಲ. ಮೊದಲು ಇಲ್ಲಿ ಸಿಗುತ್ತಿತ್ತು, ಅದನ್ನು ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಡಿಪೋದಲ್ಲಿ ಎಲ್ಲಿ ಹುಡುಕಿದರೂ ಕೂಡ ಅವರಿಗೆ ಬೇಕಾದಂತಹ ಮರ ಸಿಗುತ್ತಿಲ್ಲ. ಈ ತೊಂದರೆ ಇದೆ. ಅದಕ್ಕೆ ನಾನು ಕೂಡ ಅವರಿಗೆ ಪ್ರೋತ್ಸಾಹ ಮಾಡುತ್ತೇನೆ. ಇವತ್ತು ಶಿವಿನಿ ಮರ, ಹಲಸಿನ ಮರ ಏನಿದೆ ಅದರಲ್ಲಿ ಕಾರ್ವಿಂಗ್ ಮಾಡುವುದಕ್ಕೆ ಇವತ್ತು ಅವಕಾಶ ಇದೆ. ಆದರೆ ಏನಾಗಿದೆ ಎಂದರೆ ಇದು ಮೈಂಡ್ ಸೆಟ್ ಇದ್ದ ಹಾಗೆ. ವಂಶ ಪರಂಪರೆಯಾಗಿ ಅದರಲ್ಲಿ ಮಾಡಿ ಮಾಡಿ ಈಗ ಹಲಸಿನ ಮರದಲ್ಲಿ, ತೇಗದ ಮರದಲ್ಲಿ, ಬೀಟೆ ಮರದಲ್ಲಿ, ಹಾಗೂ ಶಿವಿನಿ ಮರದಲ್ಲಿ ಮಾಡುವುದು, ಅವರು ಅದಕ್ಕೆ ಡೈವರ್ಸಿಫಿಕೇಷನ್ ಆಗುವುದಕ್ಕೆ ಅವರು ಮಾನಸಿಕವಾಗಿ ಸಿದ್ಧರಾಗಿಲ್ಲ. ಆದುದರಿಂದ ಅವರಿಗೆ ತರಬೇತಿ ಕೊಡುವಂತಹ ವಿಚಾರದಲ್ಲಿ ಕೂಡ ನಾನು ಹೇಳಿದ್ದೇನೆ. ನಮ್ಮಲ್ಲಿ ಅದಕ್ಕೆ ಬೇಕಾದಂತಹ ಮೆಷಿನರಿ ವಗೈರಿ ಇದೆ. ಅದಕ್ಕೆ ನಾವು ನೀವೂ ಎಲ್ಲಾ ಅನಿವಾರ್ಯವಾಗಿ ಅವರನ್ನು ಬೇರೆ ಮರವನ್ನು ಉಪಯೋಗಿಸಿ ಈ ರೀತಿ ಚಿತ್ರಗಳನ್ನು ಮಾಡುವುದಕ್ಕೆ ಹಚ್ಚಬೇಕು. ಇತ್ತೀಚಿನ ದಿನಗಳಲ್ಲಿ ಕೇರಳದಿಂದ ಬಂದಂತಹವರು ಇದನ್ನು ಪ್ರಾರಂಭ ಮಾಡಿದ್ದಾರೆ. ಬೇರೆ ಬೇರೆ ಮರದಲ್ಲಿ ಮಾಡಿ ಅವರು ಈಗಾಗಲೇ ಅದನ್ನು ಪಿಕಪ್ ಮಾಡಿಬಿಟ್ಟಿದ್ದಾರೆ. ಆದರೆ ನಮ್ಮಲ್ಲಿ ಈ ವಂಶಪಾರಂಪರ್ಯವಾಗಿ ಬಂದಂತಹ ಪದ್ಧತಿ ಹಾಗೂ ಮಾನಸಿಕವಾದಂತಹ ಸಿದ್ಧತೆ ಏನಿದೆ, ಅದನ್ನು ಇನ್ನೊಂದು ಕಡೆ ವರ್ಗಾಯಿಸುವುದಕ್ಕೆ ತಯಾರಿಲ್ಲ. ಅದನ್ನು ಮಾಡಬೇಕಾದಂತಹ ಅನಿವಾರ್ಯತೆ ಇದೆ. ತಾವು ಹೇಳಿದ್ದು ನಿಜ. ಅವರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದು, ನಾವೂ ಏನೂ ಮಾಡುವ ಸ್ಥಿತಿಯಲ್ಲಿಲ್ಲ. ಈಗ ಆ ಸ್ಥಿತಿಯಲ್ಲಿ ಇದ್ದೇವೆ. ಅದರ ಬಗ್ಗೆ ನಾನು ಅರಣ್ಯ ಸಚಿವರ ಜೊತೆ ಕುಳಿತುಕೊಂಡು ತಿದ್ದುಪಡಿ ಮಾಡತಕ್ಕಂಥ

ವಿಚಾರದಲ್ಲಿ ಮಾತನಾಡಿ ಮಾಡೋಣ. ಒಂದೆರಡು ನಾರಿ ಹೇಳಿ ನಾನು ಪತ್ರ ಬರೆದು ಅವರ ಜೊತೆ ಮಾತನಾಡಿದ್ದೇನೆ. ಅರಣ್ಯ ಇಲಾಖೆಯವರು ಕೂಡ ಈ ವಿಚಾರದಲ್ಲಿ ಪರಿಶೀಲನೆ ಮಾಡುತ್ತಿದ್ದಾರೆ. ನಿಮ್ಮ ಕಳಕಳಿಯನ್ನು ಏನು ವ್ಯಕ್ತಪಡಿಸಿದ್ದೀರಿ, ನಿಮ್ಮ ಸಹಮತದ ಜೊತೆ ನನ್ನ ಸಮ್ಮತಿ ಇದೆ. ಒಟ್ಟಿನಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತಾವು ಕರೆದು ಮಾತನಾಡಿ. ಅವರು ಧರಣಿ ಹಿಂದೆ ತೆಗೆದುಕೊಳ್ಳುವುದಕ್ಕೆ ತಾವು ಮನವಿ ಮಾಡಿದರೆ, ಕರೆದು ಮಾತನಾಡುತ್ತೇವೆ, ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಒಂದು **ಮಾತು ಹೇಳಿದರೆ....**

ಶ್ರೀ ಕಾಗೋಡು ತಿಮ್ಮಪ್ಪ:– ನಾನು ಏಕೆ ಹೇಳುತ್ತೇನೆ ಎಂದರೆ, ಅವರೆಲ್ಲಾ ಹಿಂದಿನಿಂದಲೂ, ಪ್ರಾರಂಭದಿಂದಲೂ ನಾನು ಅವರ ಅಂತರಂಗದಲ್ಲಿ ಹೊಕ್ಕು ಬದುಕಿದವನು. ಕೆಲವು ವಿಚಾರದಲ್ಲಿ ಪಾಲಿಟೆಕ್ಸ್‌ನ್ನೆಲ್ಲಾ ಮಾಡುವುದಕ್ಕೆ ಹೋಗುತ್ತಾರೆ. ಅವರ ಜೊತೆಯಲ್ಲೆಲ್ಲಾ ಎಲ್ಲಾ ಸಂದರ್ಭದಲ್ಲಿ ಬಂದು ಕುಳಿತುಕೊಂಡು ಮಾತನಾಡಿ ಸಮಸ್ಯೆಯನ್ನು ಆಗಿಂದಾಗ್ಗೆ ಪರಿಹಾರ ಮಾಡುತ್ತಿದ್ದೇವೆ. ಈಗ ಈ ಸನ್ನಿವೇಶ ಇರುವುದರಿಂದ ನನಗೂ ಅಷ್ಟೇ ಸಂಕಟ ಏನೂ ಮಾಡುವುದಕ್ಕಾಗುತ್ತಿಲ್ಲವೆನ್ನು ವಂತಹ ಸನ್ನಿವೇಶ ಬಂದು ಬಿಟ್ಟಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಜೊತೆ ಸಮಸ್ಯೆಯನ್ನು ಅರಿತುಕೊಂಡು, ಬೆಳೆದುಬಂದವರು. ಓಟ್ ಅವರಿಗೆ ಕೊಡುತ್ತಾರೆ. ಏಕೋ ನಾವು ಹೋದ ತಕ್ಷಣ ಇರಿಟೇಟ್ ಆಗುತ್ತದೆ ಎಂದು.

(vii) ವಿಷಯ:– ಮೈಸೂರಿನ ಜಯಚಾಮರಾಜೇಂದ್ರ ಮೃಗಾಲಯದಲ್ಲಿ ಆಡಳಿತ ವರ್ಗ ಮತ್ತು ನೌಕರರು:ಮಧ್ಯದಲ್ಲಿ ಆಗಿರುವಂತಹ ಸಮರ

ಶ್ರೀ ಎ. ರಾಮದಾಸ್ (ಕೃಷ್ಣರಾಜ):– ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲಾ ಮಂತ್ರಿಗಳು ಕೂಡ ಇಲ್ಲಿ ಇದ್ದಾರೆ. ಕಳೆದ ಐದು ದಿವಸಗಳ ಕಾಲದಿಂದ ಮೈಸೂರಿನ ಎಲ್ಲಾ ಸ್ಥಳೀಯ ಪತ್ರಿಕೆಗಳಲ್ಲಿ ಅದು ಮುಖಪುಟದಲ್ಲಿ ಬರುವಂತಹ ವಿಷಯಗಳು ಪ್ರತಿನಿತ್ಯ ಇದೆ. ಅದು ಮೈಸೂರು ಮಿತ್ರ. 'ಪ್ರಜಾ ನುಡಿ' ಎಲ್ಲಾ ಪತ್ರಿಕೆಗಳಲ್ಲೂ ಕೂಡ ಕಳೆದ ಐದು ದಿವಸಗಳಿಂದ ನಿರಂತರವಾಗಿ ಬರುತ್ತಿರುವಂತಹ ಸುದ್ದಿ ಎಂದರೆ ಮೈಸೂರಿನಲ್ಲಿರುವ ಜಗದ್ವಿಖ್ಯಾತವಾದಂತಹ 'ಜಯಚಾಮರಾಜೇಂದ್ರ' ಮೃಗಾಲಯದಲ್ಲಿ ಆಗುತ್ತಿರುವ ಒಂದು ಸಮಸ್ಯೆ, ಶೀತಲ ಸಮರ ನಿರಂತರವಾಗಿ ಬರುತ್ತಿದೆ. ಇನ್ನು ಎರಡನೆಯದಾಗಿ ಕಳೆದ ಬಾರಿ ವಿಧಾನಸಭೆಯಲ್ಲಿ ಕೂಡ ಇದು ಚರ್ಚೆಯಾಗಿತ್ತು. ಕಳೆದ ಆರು ತಿಂಗಳಿನಿಂದ ಈ ಒಂದು ಮೃಗಾಲಯದಲ್ಲಿ ಆಡಳಿತ ವರ್ಗ ಮತ್ತು ನೌಕರರು, ಇವರಿಬ್ಬರ ಮಧ್ಯದಲ್ಲಿ ಆಗಿರುವಂತಹ ಸಮರ ಅದು ಸ್ಟ್ರೀಟ್ ಫೈಟಿಕ ಆದಂತಹ ವಿಚಾರ ಕೂಡ ಎಲ್ಲರಿಗೂ ಗೊತ್ತಿದೆ. ಇದರಿಂದ 14 ಪ್ರಾಣಿಗಳು ಸತ್ತಿವೆ. 14 ಪ್ರಕರಣಗಳು ದಾಖಲಾಗಿ ಆಗಿವೆ. ಆದು ಯಾವುದೇ ರೋಗ ಬಂದು ಅಲ್ಲ. ಅಲ್ಲಿರತಕ್ಕಂಥ ಇಂಟರ್‌ನಲ್ ಪ್ರಾಬ್ಲ್ಸ್‌ನಿಂದ ನೌಕರರು ಆಹಾರವನ್ನು ಕೊಡುವಂತಹ ಸಂದರ್ಭದಲ್ಲಿ ಆಗಿರುವಂಥದ್ದು. ಹೀಗೆ 14 ಪ್ರಕರಣಗಳಲ್ಲಿ 14 ಪ್ರಾಣಿಗಳು ಸತ್ತಿರುವಂಥದ್ದು ದಾಖಲಾತಿಯಾಗಿವೆ. ಇದರಲ್ಲಿ ಕೆಲವು ನೌಕರರ ಮೇಲೆ ಕೂಡ ಕ್ರಮವನ್ನು ಕೈಗೊಂಡಿತ್ತು. ವಿಶೇಷವಾಗಿ ಪ್ರಾಣಿಗಳ ರಕ್ಷಣೆಯ ಹಿತದೃಷ್ಟಿಯಿಂದ ನೌಕರರ ಮೇಲೆ ಸರ್ಕಾರ ಕ್ರಮವನ್ನು ಕೈಗೊಂಡು ಆಮೇಲೆ ಎಲ್ಲೋ ನಿಯಂತ್ರಣಕ್ಕೆ ಬಂದಿದೆ